# ಜಗದೇಕ ಶ್ರೀಮಂತನ ಕನಸು

ಜೆಫ್ ಬಿಜೋಸ್ ಈಗ ವಿಶ್ವದ 'ನಂಬರ್ ಒನ್' ಶ್ರೀಮಂತ. ಮಾರ್ಚ್ ಎರಡನೇ ವಾರದಲ್ಲಿ 'ಫೋರ್ಬ್ಸ್' ಪ್ರಕಟಿಸಿದ ಶ್ರೀಮಂತರ ಪಟ್ಟಿಯ ಪ್ರಕಾರ, ಮೈಕ್ರೊಸಾಫ್ಟ್‌ನ ಬಿಲ್ ಗೇಟ್ಸ್‌ನನ್ನು ಹಿಂದಿಕ್ಕಿದ ಜೆಫ್ ಬಿಜೋಸ್, 131 ಶತಕೋಟಿ ಡಾಲರ್ (ಸುಮಾರು 8.45 ಲಕ್ಷ ಕೋಟಿ ರೂಪಾಯಿ) ವೈಯಕ್ತಿಕ ಆಸ್ತಿಯೊಂದಿಗೆ ಮೊದಲ ಸ್ಥಾನದಲ್ಲಿದ್ದಾರೆ. ಜೆಫ್ ಬಿಜೋಸ್ ಎಂದರೆ ನಮ್ಮವರಿಗೆ ಪರಿಚಯ ಆಗಲಿಕ್ಕಿಲ್ಲ; ಅದೇ 'ಅಮೆಜಾನ್.ಕಾಮ್ ಕಂಪನಿಯ ಒಡೆಯ' ಎಂದರೆ ತಕ್ಷಣ ಗೊತ್ತಾದೀತು. 770 ಶತಕೋಟಿ ಡಾಲರ್ ಮೌಲ್ಯದ ದೈತ್ಯ ಬಹುರಾಷ್ಟ್ರೀಯ ಕಂಪನಿ ಅಮೆಜಾನ್.ಕಾಮ್ ಅನ್ನು ಕಟ್ಟಿ ಬೆಳೆಸಲು ಜೆಫ್ ಕಳೆದ 23 ವರ್ಷಗಳಲ್ಲಿ ಸಾಕಷ್ಟು ಬೆವರು ಹರಿಸಿದ್ದಾರೆ. 1994ರಲ್ಲಿ ಮನೆಯ ಗ್ಯಾರೇಜ್‌ನಲ್ಲಿ ಆರಂಭವಾದ ಈ ಆನ್‌ಲೈನ್ ಪುಸ್ತಕ ವ್ಯಾಪಾರದ ಕಂಪನಿ ಇವತ್ತು ಮುಗಿಲ ಕೆಳಗಿನ ಬಹುತೇಕ ಎಲ್ಲ ವಸ್ತುಗಳ ವ್ಯಾಪಾರವನ್ನೂ ಕೈಗೆತ್ತಿಕೊಂಡು ಮುಗಿಲೆತ್ತರಕ್ಕೆ ಬೆಳೆದು ನಿಂತಿದೆ. ಆ ಕಂಪನಿ ತಂದು ಸುರಿಯುತ್ತಿರುವ ಲಾಭದ ದುಡ್ಡಲ್ಲಿ ಜೆಫ್ ಅಂತರಿಕ್ಷ ಯಾನದ ಕಂಪನಿಯೊಂದನ್ನು ಹಾಗೂ ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯನ್ನೂ ನಡೆಸುತ್ತಿದ್ದಾರೆ.

ಅಮೆಜಾನ್ ಕಂಪನಿಯ ಷೇರು ಬೆಲೆ ಒಂದೇ ಸಮನೆ ಗಗನಕ್ಕೇರುತ್ತಿದೆ. ಕಳೆದ ವರ್ಷ ಮೇನಲ್ಲಿ ಕಂಪನಿಯ ಷೇರು ಬೆಲೆ 1000 ಡಾಲರ್ ಇತ್ತು. ಈ ವರ್ಷದ ಮಾರ್ಚ್ 13ರಂದು 1588 ಡಾಲರ್‌ಗೆ ಏರಿದೆ. ಇನ್ನೇನು ಮುಂದಿನ ವರ್ಷ 2000 ಡಾಲರ್‌ಗೆ ತಲುಪುವುದು ಖಚಿತ ಎಂದು ಷೇರುಪೇಟೆಯ ತಜ್ಞರು ಭವಿಷ್ಯ ನುಡಿದಿದ್ದಾರೆ. ಕಳೆದ ಒಂದು ವರ್ಷದಲ್ಲಿ ಅಮೆಜಾನ್ ಷೇರು ಬೆಲೆ ಶೇಕಡಾ 34ರಷ್ಟು ಏರಿಕೆ ಕಂಡಿದೆ.

ಅಮೆಜಾನ್‌ನ ಕಂಪನಿಯಿಂದ ಬರುವ ಲಾಭದಲ್ಲಿ ಪ್ರತಿವರ್ಷ ಒಂದು ಶತಕೋಟಿ ಡಾಲರ್ ಹಣವನ್ನು ಜೆಫ್ ತನ್ನ ಅಂತರಿಕ್ಷಯಾನ ಕಂಪನಿ ಬ್ಲೂ ಒರಿಜಿನ್‌ಗೆ ಸುರಿಯುತ್ತಿದ್ದಾನೆ. 'ಅಂತರಿಕ್ಷ ಯಾನದಲ್ಲಿ ಸಾರ್ವಜನಿಕರು ಹೆಚ್ಚುಹೆಚ್ಚಾಗಿ ಭಾಗವಹಿಸಬೇಕು. ಅದಕ್ಕಾಗಿ ಈ ಯಾನವನ್ನು ಜನರ ಕೈಗೆಟಕುವ ದರದಲ್ಲಿ ಸಿಗುವಂತೆ ಮಾಡಬೇಕು' ಎನ್ನುವುದು ಜೆಫ್ ಕನಸಂತೆ. ಭೂಕಕ್ಷೆಗೆ ಪ್ರಯಾಣಿಕರನ್ನು ಸಾಗಿಸುವ ಆತನ ಹೊಸ ರಾಕೆಟ್ ಈ ವರ್ಷವೇ ಕಾರ್ಯಾರಂಭ ಮಾಡಲಿದೆಯಂತೆ. ಮರುಬಳಕೆಯ ರಾಕೆಟ್/ ಸ್ಪೇಸ್‌ಕ್ರಾಫ್ಟ್ ನಿರ್ಮಾಣಕ್ಕೆ ಈಗಾಗಲೆ ಶತಕೋಟಿಗಟ್ಟಲೆ ಹಣ ಸುರಿದಾಗಿದೆ. 2020ರಲ್ಲಿ 'ನ್ಯೂ ಗ್ಲೆನ್' ಹೆಸರಿನ ಹೆವಿ ಲಿಫ್ಟ್ ರಾಕೆಟ್ ತಯಾರಾಗಲಿದೆ. ಈ ಮಧ್ಯೆ ಶೆಪರ್ಡ್ ರಾಕೆಟ್+ಸ್ಪೇಸ್‌ಷಿಪ್ ಜಂಟಿ ಯಾನದ ಸಿದ್ಧತೆಯೂ ನಡೆದಿದೆ. ಸೌರವ್ಯೂಹದ ಅನ್ವೇಷಣೆಯಲ್ಲಿ ಜಗತ್ತಿನ ಬುದ್ಧಿವಂತರೆಲ್ಲ ಭಾಗವಹಿಸಬೇಕು. ಜನರು ಬದುಕಲು ಮತ್ತು ದುಡಿಯಲು ಹೊಸ ಗ್ರಹಗಳಲ್ಲಿ ಅವಕಾಶ ಒದಗಬೇಕು ಎನ್ನುವುದು ಈತ ಸದಾ ಹೇಳುವ ಮಾತು. 'ಈ ಭೂಮಿಯಲ್ಲಿ ಮನುಷ್ಯರು ಓವರ್‌ಲೋಡ್ ಮಾಡುತ್ತಿದ್ದಾರೆ. ನನ್ನ ಮರಿಮಕ್ಕಳ ಕಾಲಕ್ಕೆ ಭೂಮಿ ಸಹನೀಯವಾಗಿ ಇರಬೇಕೆಂದರೆ ಭಾರೀ ಉದ್ಯಮಗಳನ್ನು ಬೇರೆ ಗ್ರಹಗಳಲ್ಲಿ ಸ್ಥಾಪಿಸಲು ನಾವು ಈಗಿನಿಂದಲೇ ಅನ್ವೇಷಣೆಗಳನ್ನು ಕೈಗೊಳ್ಳಬೇಕು' ಎನ್ನುವುದು ಈತನ ಇರಾದೆ.

ಹಾಲಿವುಡ್ ಹೀರೋಗಳಂತೆ ದೈಹಿಕವಾಗಿ ಫಿಟ್ ಆಗಿರುವ ಜೆಫ್ ತಲೆ ಸದಾ ಬೋಳು ಬೋಳು. ಬೆಳಿಗ್ಗೆಯ ಉಪಾಹಾರವನ್ನು ಈತ ಕಡ್ಡಾಯವಾಗಿ ಪತ್ನಿಯ ಜತೆಗೇ ಮಾಡುತ್ತಾನೆ. ಈತನ ಪತ್ನಿ ಮೆಕೆಂಜೀ ಬಿಜೋಸ್ ಕಾದಂಬರಿಗಳನ್ನು ಬರೆಯುತ್ತಾಳೆ. ನಾಲ್ವರು ಮಕ್ಕಳಿದ್ದಾರೆ. ಈತ ಕಚೇರಿಯಲ್ಲಿ ಯಾವತ್ತೂ ಬೆಳಿಗ್ಗೆ ಬೇಗ ಮೀಟಿಂಗ್ ಇಟ್ಟುಕೊಳ್ಳುವುದಿಲ್ಲ. ತಡವಾಗಿ ಮೀಟಿಂಗ್ ಇಟ್ಟುಕೊಂಡಾಗಲೂ ಅಲ್ಲಿರುವ ಎಲ್ಲರಿಗೂ ಎರಡು ಪಿಜ್ಜಾಗಳಷ್ಟೇ ಆಹಾರವಂತೆ. ಆದರೆ ಕೆಲಸದಲ್ಲಿ ಕಟ್ಟುನಿಟ್ಟು. ಉದ್ಯೋಗಿಗಳಿಗೆ ಉಚಿತ ಸವಲತ್ತುಗಳನ್ನು ಕೊಡುವುದರಲ್ಲಿ ಬಹಳ ಹಿಂದೆ. ಬೇರೆ ಬಹುರಾಷ್ಟ್ರೀಯ ಕಂಪನಿಗಳಲ್ಲಿರುವಂತೆ ಈತನ ಕಚೇರಿಯಲ್ಲಿ ಸಬ್ಸಿಡಿ ಊಟವೂ ಇಲ್ಲ.

ಹಾಗೆಂದು ಈತನ ಊಟದ ಬಗ್ಗೆ ಕೇಳಬೇಡಿ. ಕಳೆದ ವಾರ ನ್ಯೂಯಾರ್ಕ್‌ನ ಎಕ್ಸ್‌ಪ್ಲೋರರ್ ಕ್ಲಬ್‌ನಲ್ಲಿ ಈತನಿಗೆ ಸ್ಪೇಸ್ ಎಕ್ಸ್‌ಪ್ಲೋರೇಷನ್ ಪ್ರಶಸ್ತಿ ನೀಡಲಾಯಿತು. ಸಮಾರಂಭದ ಬಳಿಕ ಊಟದ ಟೇಬಲ್‌ನಲ್ಲಿ ಈತ ಬೇಯಿಸಿದ (ಇಗುವಾನಾ) ಹಲ್ಲಿಯೊಂದನ್ನು ತಿನ್ನುತ್ತಿರುವ ಫೋಟೊ ಸಾಮಾಜಿಕ ಜಾಲತಾಣದಲ್ಲಿ ಸೂಪರ್‌ಹಿಟ್ ಆಗಿತ್ತು. ಅಕ್ಟೋಪಸ್ ಜತೆಗೆ ಆಲೂಗಡ್ಡೆ, ಮೊಟ್ಟೆ, ಗ್ರೀನ್ ಗಾರ್ಲಿಕ್ ಯೋಗರ್ಟ್ ಎಲ್ಲವೂ ಈತನ ಅಚ್ಚುಮೆಚ್ಚಿನ ಆಹಾರ! ಕುತೂಹಲದ ಸಂಗತಿಯೆಂದರೆ, ಪ್ರತಿದಿನ ರಾತ್ರಿ ಕನಿಷ್ಠ ಎಂಟು ಗಂಟೆಗಳ ನಿದ್ರೆ ಹೊಡೆಯುವುದು. ಅದರಲ್ಲೂ ಬೆಳಿಗ್ಗೆ ಏಳುವುದಕ್ಕೆ ಈತ ಯಾವತ್ತೂ ಅಲಾರಾಂ ಇಟ್ಟುಕೊಳ್ಳುವುದಿಲ್ಲ. ತಾನಾಗಿಯೇ ಎಚ್ಚರವಾಗಬೇಕು. ಊಟದ ಬಳಿಕ ಪ್ರತಿದಿನ ತನ್ನ ತಟ್ಟೆ ತೊಳೆಯೋದು ಈತ ಅತ್ಯಂತ ಹೆಚ್ಚು ಪ್ರೀತಿಸುವ ಕೆಲಸವಂತೆ. ಸ್ಟಾರ್‌ಟ್ರೆಕ್ ಸಿನಿಮಾ, ಸಾಕ್ಷ್ಯಚಿತ್ರಗಳನ್ನು ಸದಾ ನೋಡುವ ಈತ, 'ಸ್ಪೇಸ್ ಟ್ರ್ಯಾಕ್ ಬಿಯಾಂಡ್' ಎನ್ನುವ ಸಿನಿಮಾದಲ್ಲಿ ನಟಿಸಿದ್ದೂ ಉಂಟು.



ಲಕ್ಷ್ಮಿ ಕಾಲುಮುರಿದುಕೊಂಡು ಕಾಲಬುಡದಲ್ಲಿ ಬಿದ್ದಿದ್ದರೂ ಈತ ಈಗಲೂ ವರ್ಕೊಹಾಲಿಕ್. ಕಚೇರಿಯಲ್ಲಿ ಸಹೋದ್ಯೋಗಿಗಳ ಮೇಲೆ ಕಿರುಚಾಟ, ಕೂಗಾಟ ಎಲ್ಲವೂ ಸಹಜ. ಇತ್ತೀಚೆಗೆ ತನ್ನ ಸಿಟ್ಟನ್ನು ನಿಯಂತ್ರಣಕ್ಕೆ ಸಹಕರಿಸಲು ಒಬ್ಬ ಎಕ್ಸಿಕ್ಯೂಟಿವ್‌ನನ್ನು ನೇಮಿಸಿಕೊಂಡಿದ್ದಾನೆಂದೂ ಸುದ್ದಿಯಿದೆ. ಈತನ ಅಂತರಿಕ್ಷದ ಕನಸುಗಳು ಬೇಗ ನನಸಾಗಲಿ. ಶೀಘ್ರದಲ್ಲೇ ಭೂಮಿಯ ಜನರು ಅಂತರಿಕ್ಷದಲ್ಲಿ ಉದ್ಯೋಗ ಮತ್ತು ಬದುಕು ನಡೆಸುವಂತಾಗಲಿ. ಈ ವರ್ಷವೇ ಕಡಿಮೆ ವೆಚ್ಚದಲ್ಲಿ ಸಾರ್ವಜನಿಕರು ಭೂಕಕ್ಷೆಯ ಪ್ರಯಾಣ ನಡೆಸುವಂತಾಗಲಿ. ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65